ಮತ್ತೆ ಮತ್ತೆ ಬೇರೆ ಬೇರೆ ಜಾಲತಾಣಗಳಲ್ಲಿ ಸಿಗುತ್ತಲೇ ಇರುತ್ತವೆ. ನಮಗೆ ಬೇಕಿರಲಿ ಬೇಡದಿರಲಿ, ಅಂತರ್ಜಾಲ ನಮ್ಮೆಲ್ಲರ ಬದುಕುಗಳನ್ನು ಆವರಿಸಿಕೊಂಡಾಗಿದೆ. ಹೊಸವರ್ಷದಲ್ಲಿ ನಮಗೆ ತುರ್ತಾಗಿ ಬೇಕಿರುವುದು ಅಂತರ್ಜಾಲದ ಆಳವಾದ ಶಿಕ್ಷಣ–ಎಚ್ಚರ. ಅಂತರ್ಜಾಲದಲ್ಲಿ ಎಂಥ ಗಾಢವಾದ ಸ್ನೇಹ–ಪ್ರೇಮ ಇದ್ದರೂ ಪರಸ್ಪರ ನಗ್ನಚಿತ್ರಗಳನ್ನು ಕಳಿಸಕೂಡದು ಎಂದು ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕು. ಎಲ್ಲ ಕಡೆಗೂ ಒಂದೇ ಪಾಸ್‌ವರ್ಡ್ ಉಪಯೋಗಿಸುವುದನ್ನು ನಿಯಂತ್ರಿಸಬೇಕು.

ನಮ್ಮಲ್ಲಿ ಕೆಲವರು 'ನನ್ನ ಬಳಿ ಮುಚ್ಚಿಡುವಂಥದ್ದು ಏನಿಲ್ಲ; ನಾನೊಂದು ತೆರೆದ ಪುಸ್ತಕವಿದ್ದಂತೆ' ಎಂದು ತಮ್ಮ ಪಾಸ್‌ವರ್ಡ್‌ಗಳನ್ನು ಎಲ್ಲೆಂದರಲ್ಲಿ ಅನಾವರಣಗೊಳಿಸುತ್ತಾರೆ. ಅಂತರ್ಜಾಲ ಅರಿವಿನ ಮೊದಲ ಪಾಠವೆಂದರೆ ಪಾಸ್‌ವರ್ಡ್‌ಗಳನ್ನು ಎಲ್ಲಿಯೂ ಬಹಿರಂಗಪಡಿಸಬಾರದು ಎಂಬುದು. ಹೀಗೆ ಮಾಡಿದಾಗ ಹ್ಯಾಕರ್‌ಗಳು ನಮ್ಮ ಅಕೌಂಟನ್ನು ನಮಗೇ ಸಿಗದ ಹಾಗೆ ಮಾಡಬಹುದು. ಇದರ ಜೊತೆಗೆ ಹದಿಹರೆಯದ ಮಕ್ಕಳು ಅಂತರ್ಜಾಲವನ್ನು ಯಾವ ರೀತಿಯಾಗಿ ಉಪಯೋಗಿಸುತ್ತಿದ್ದಾರೆ ಎಂಬ ಕುರಿತಾಗಿಯೂ ಪೋಷಕರು ಕಣ್ಣಿಡಬೇಕು.

ಮತ್ತೊಂದು ಹೊಸವರ್ಷದ ಹೊಸ್ತಿಲಲ್ಲಿರುವ ಈ ಸಂದರ್ಭದಲ್ಲಿ ನನ್ನನ್ನು ಕಾಡುತ್ತಿರುವ ಇನ್ನೊಂದು ಸಂಗತಿ ಅಮಲು ಹಂಚುವ ರಾಜಕಾರಣದ್ದು. ಭಾರತ, ಅಮೆರಿಕ, ಬ್ರಿಟನ್ ಸೇರಿದಂತೆ ಜಗತ್ತಿನ ಪ್ರಮುಖ ದೇಶಗಳ ಜನ ಇತ್ತೀಚಿನ ವರ್ಷಗಳಲ್ಲಿ ಪಾಪ್ಯೂಲಿಸ್ಟ್ ಸರ್ಕಾರಗಳನ್ನು ಆಯ್ಕೆ ಮಾಡಿದ್ದಾರೆ; ಮಾಡುತ್ತಿದ್ದಾರೆ. ಈ ಜನಪ್ರಿಯ ಮಾದರಿಯ ಸರ್ಕಾರಗಳು ಜನರನ್ನು ಪಂಗಡಗಳಾಗಿ ಒಡೆದು ಒಬ್ಬರ ವಿರುದ್ಧ ಇನ್ನೊಬ್ಬರನ್ನು ಎತ್ತಿಕಟ್ಟಿ ಮಜಾ ನೋಡುವುದರಲ್ಲಿ ಸಫಲವಾಗಿವೆ. ಈ ಪರಿಣಾಮವಾಗಿ ನಿನ್ನೆಯ ತನಕ ಸ್ನೇಹಿತರಾಗಿದ್ದವರ ನಡುವೆ ಆತಂಕ, ಅನುಮಾನಗಳು ನುಸುಳುತ್ತಿವೆ.

ಜನರ ನಡುವೆ ಬಿರುಕು ಮೂಡಿಸಿದರೆ ಅವರನ್ನು ಆಳುವುದು ಮತ್ತವರನ್ನು ಗೆಲ್ಲುವುದು ಸುಲಭ ಎಂದು ಈ ಜನಪ್ರಿಯ ನಾಯಕರಿಗೆ ತಿಳಿದಿದೆ. ಈ ಟ್ರಿಕ್‌ಗಳು ಜನರಿಗೂ ತಿಳಿದರೆ ಒಡಕುಗಳನ್ನು ಆದಷ್ಟು ಮುಚ್ಚಿ ಒಡನಾಟವನ್ನು ಸಹ್ಯವಾಗಿಸಬಹುದೇನೋ. ಧರ್ಮಾಂಧತೆಯನ್ನು ಎಳೆಯ ವಯಸ್ಸಿನಲ್ಲಿಯೇ ಮಕ್ಕಳ ಮನಸ್ಸಿನಲ್ಲಿ ಬಿತ್ತಲಾಗುತ್ತಿದೆ. ಎಂಥದೇ ಗಗನಚುಂಬಿ ಮಂದಿರ ಕಟ್ಟಿದರೂ ಅದರ ಮುಂದೆ ಭಿಕ್ಷೆ ಬೇಡುವವರೇನು ಕಡಿಮೆಯಾಗುವುದಿಲ್ಲ ಎಂಬುದು ನಮಗೆ ತಿಳಿದಿರಬೇಕು.

ನಮ್ಮದು ಮೊದಲಿನಿಂದಲೂ ಪ್ರತ್ಯೇಕತೆಯಲ್ಲಿ ಏಕತೆಯನ್ನು ಕಂಡ ದೇಶ. ರಾಜಕೀಯ ಪಕ್ಷಗಳು, ಅವುಗಳ ನಾಯಕರು ಮತ್ತು ಪಕ್ಷದ ಅಜೆಂಡಾಗಳು ಕಾಲಕಾಲಕ್ಕೆ ಬದಲಾದರೂ ಬಹುಸಂಖ್ಯಾತರ ದಿನನಿತ್ಯದ ಬದುಕು ಅಷ್ಟೇನೂ ಬದಲಾಗುವುದಿಲ್ಲ. ನಮ್ಮ ಕಾಳಜಿ ಇರಬೇಕಾದದ್ದು ಸಮಾಜದ ಅಂಚಿನಲ್ಲಿರುವವರ ಬವಣೆಗಳ ಬಗ್ಗೆ. ಯಾವುದೇ ಕಾಯ್ದೆ ಬದುಕಿಗಿಂತ ದೊಡ್ಡದಲ್ಲ. ಯಾವುದೋ ಒಂದು ಪಂಗಡಕ್ಕೆ ಸೇರಿದವರೆಂಬ ಕಾರಣಕ್ಕೆ ಅವರನ್ನು ಭೂತಕನ್ನಡಿಯಲ್ಲಿಟ್ಟು ನೋಡುವುದು ತರವಲ್ಲ.

ರಾಜಕಾರಣಿಗಳ ಭಾಷಣ, ಗದ್ದಲದ ನಡುವೆಯೂ ನಾವು ಸಮನ್ವಯವನ್ನು ಕಂಡುಕೊಳ್ಳಬೇಕಿದೆ. ಈ ಅಮಲು ಹಂಚುವ ರಾಜಕಾರಣವನ್ನು ಪ್ರಜ್ಞಾವಂತ ಸಮಾಜ ನಿರ್ಲಕ್ಷಿಸಬೇಕಿದೆ. ಎಡ–ಬಲಗಳ ಹಂಗು ತೊರೆದು ಮಾನವತಾವಾದವನ್ನು ಪ್ರತಿಪಾದಿಸುವುದು ಮುಖ್ಯ ಗುರಿಯಾಗಬೇಕಿದೆ. ಅಂತರ್ಜಾಲದ ಒಳ–ಹೊರಗಿನ ಕುರಿತು ಅರಿವು ಮತ್ತು ಜನಪ್ರಿಯ ರಾಜಕಾರಣಿಗಳ ಮನದಿಂಗಿತದ ತಿಳಿವು ಈ ಹೊಸ ವರ್ಷ ನಾವು ಸಾಗುವ ದಾರಿಗೆ ಕೈಮರವಾಗಬಲ್ಲವು ಅಂತ ನನ್ನ ನಂಬಿಕೆ. ■

ನಿರಂತರವಾಗಿ ನಡೆದಿವೆ. ಈ ಸವಾಲುಗಳ ನಡುವೆಯೇ ಹೊಸ ಹೊಸ ಆವಿಷ್ಕಾರಗಳು ಚಿಂತನೆಗಳು ಅರಳುವುದೇ ಒಂದು ವೈಶಿಷ್ಟ್ಯ. ಯೂರೋಪಿನಲ್ಲಿ ಧರ್ಮಾಂಧತೆ ಉತ್ತುಂಗಕ್ಕೇರಿ ಅರಾಜಕತೆ ತಲೆದೋರಿದಾಗ ಪ್ರಕೃತಿ ಪಿತೂರಿ ನಡೆಸಿತ್ತು. ಪ್ಲೇಗ್ ಮತ್ತು ಬ್ಲಾಕ್ ಡೆತ್ ರೋಗಗಳು ಆ ದೇಶಗಳನ್ನು ನುಂಗಿಹಾಕಿದವು. ಯೂರೋಪಿನ ಅರ್ಧ ಜನಸಂಖ್ಯೆ ನಾಶವಾಯ್ತು. ಆ ನಂತರವೇ ಸಂವೇದನಾಶೀಲ ಕೃತಿಗಳು, ಸೃಜನಾತ್ಮಕ ಕಲೆಗಳು, ವಿಜ್ಞಾನದ ಮಹಾ ಅನ್ವೇಷಣೆಗಳು ಅನಾವರಣಗೊಂಡವು. ರೆನೈಸನ್ಸ್, ಯುವ ವಿಜೃಂಭಿಸಿತ್ತು. ಚರಿತ್ರೆಯ ಪುಟಗಳೇ ಹಾಗೆ. ವಿಜ್ಞಾನ ಮತ್ತು ಅಂಧತೆಗಳನ್ನು ಗೆದ್ದು ಸತ್ಯ ಹೊರಬರುವ ಹೊತ್ತಿಗೆ ಲೆಕ್ಕವಿಲ್ಲದಷ್ಟು ಆತ್ಮಗಳು ಬಲಿಪಶುಗಳಾಗಿರುತ್ತವೆ.

ಥಾಮಸ್ ಮೋರ್‌ನ 'ಯುಟೋಪಿಯಾ' ಕನಸು ಎಂದಿಗೂ ಕನಸು ಮಾತ್ರ. ಪರಿಪೂರ್ಣ ಸಮಾಜ ಸಾಧ್ಯವಾಗದ ಕಲ್ಪನೆ. ಆದರೆ ಮುದುಮಲೈ ಕಾಡಿನ ಬೊಮ್ಮಿ–ಚೆನ್ನರ ನಾಡಿನಲ್ಲಿ, ಬಹಳ ಹಿಂದೆ ಈ ಕನಸಿನ ಸಣ್ಣ ಭಾಗವನ್ನು ನಾವು ಕಂಡಿದ್ದುಂಟು.

ಹತ್ತು ಹನ್ನೆರಡು ಸಾವಿರ ವರ್ಷಗಳ ಹಿಂದೆ ನಾವೆಲ್ಲರು ಬೇಸಾಯಗಾರರಾಗಿ ಬದಲಾಗಿ ಗಿಡ–ಬಳ್ಳಿಗಳನ್ನು, ಪ್ರಾಣಿ–ಪಕ್ಷಿಗಳನ್ನು ಪಳಗಿಸಿ ಭೂಮಿಯನ್ನು ಹಂಚಿಕೊಳ್ಳುವ ಭರಾಟೆಯಲ್ಲಿದ್ದೆವು. ಮುಂದುವರಿದು ಭೂಮಿಗಾಗಿ ಕಾದಾಡಿ, ಕಾವಲಿಗೆ ದೇವರನ್ನು ಕರೆತಂದು ಮುಂದೊಂದು ದಿನ ಅವನಿಗೇ ಲಂಚ ನೀಡಲು ಆರಂಭಿಸಿದ್ದು ಚರಿತ್ರೆ. ಆದರೆ ಬೇಸಾಯದ ಬದುಕನ್ನೇ ತಿರಸ್ಕರಿಸಿದ ಅವರಿಬ್ಬರೂ ಕಾಡು ಸೇರಿದ್ದರು. ಸ್ವಂತ ಆಸ್ತಿಯ ಪರಿಕಲ್ಪನೆಯೇ ಇಲ್ಲದೆ ಕಾಡಿನಲ್ಲಿ ಒಂದಾಗಿದ್ದರು. ಅವರು ನಮ್ಮ ಮಕ್ಕಳಿಗೆ ಬಿಟ್ಟು ಹೋಗುವ ಆಸ್ತಿ ಎಂದರೆ ಕಾಡಿನಲ್ಲಿ ಬದುಕುಳಿಯುವ ಕಲೆ ಮತ್ತು ಕೌಶಲ ಮಾತ್ರ. ಹೀಗೆ ಸಾವಿರಾರು ವರ್ಷಗಳು ಕಳೆದಂತೆ ಈಗ ಇಂದಿನ ಅವರ ಬದುಕು ಅಸ್ತವ್ಯಸ್ತವಾಗಿದೆ; ಅಳಿವಿನಂಚಿನಲ್ಲಿದೆ.

ಹೀಗೆಂದು, ಬರುವ ವರ್ಷದಲ್ಲಿ ನಾನೇನೂ 'ಯುಟೋಪಿಯಾ'ವನ್ನೇನೂ ನಿರೀಕ್ಷಿಸುತ್ತಿಲ್ಲ. ಸ್ವಲ್ಪ ಸ್ವಚ್ಛವಾದ ನೀರು, ಸ್ವಲ್ಪ ಶುದ್ಧವಾದ ಗಾಳಿ, ಸ್ವಲ್ಪ ಸ್ವಾತಂತ್ರ್ಯ...

ಎಲ್ಲರಿಗೂ... ■


